


# ನಕ್ಕುಬಿಡಿ..!



ಕಂಡಕ್ಟರ್: ಯಾಕೋ, ನಾನು 3 ಸಲ ವಿಷಲ್ ಹೊಡೆದ್ರೂ ಬಸ್ ನಿಲ್ಲಿಸ್ತಾ ಇಲ್ಲ?

ಡ್ರೈವರ್: ಥೂ.. ಇಲ್ಲಿ ನಾನು ಬ್ರೇಕ್ ಹೊಡೆದ್ರೂ ಬಸ್ ನಿಲ್ತಾ ಇಲ್ಲ, ಇನ್ನು ನಿನ್ನ ವಿಷಲ್‌ಗೆ ಹೆಂಗಪ್ಪೊ ನಿಲ್ಲುತ್ತೇ!

★★★

ಸಿಂಹಕ್ಕೆ ಹಂದಿಯೊಂದು ಎದುರಾಯಿತು. ಸಿಂಹ ಹೇಳಿತು, 'ನಾನು ಗರ್ಜಿಸಿದರೆ ಇಡೀ ಕಾಡು ಹೆದರಿ ನಡುಗುತ್ತೆ, ಗೊತ್ತಾ?'

ಹಂದಿ ಹೇಳಿತು. 'ನಾನು ಸೀನಿದರೆ ಇಡೀ ಪ್ರಪಂಚವೇ ಸ್ವೈನ್ ಫ್ಲೂ ಎಂದು ಹೆದರಿ ನಡುಗುತ್ತೆ, ಅದು ಗೊತ್ತಾ!'

★★★

ಅಂಬಾನಿ: ನಾನು ಮುಂಜಾನೆಯೇ ಕಾರಿನಲ್ಲಿ ಹೊರಟು, ಸೂರ್ಯ ಮುಳುಗುವ ತನಕ ಕಾರಿನಲ್ಲಿ ತಿರುಗಿದರೂ, ನನ್ನ ಎಸ್ಟೇಟ್‌ನಲ್ಲಿ ಅರ್ಧ ಭಾಗ ಕೂಡ ನೋಡಕ್ಕಾಗಲ್ಲ..'

ಗುಂಡ: ಅಯ್ಯೋ! ನಮ್ಮಪ್ಪನ ಹತ್ತಿರಾನೂ ಅಂತಹ ಹಳೇ ಕಾರೊಂದಿದೆ!

★★★



ಕುಪಿತ ಗಂಡ ಮಾವನಿಗೊಂದು ಎಸ್‌ಎಮ್‌ಎಸ್ ಮಾಡಿದ– 'ನಿಮ್ಮ ಪ್ರಾಡಕ್ಟ್ ನನಗೆ ಹೊಂದಾಣಿಕೆಯಾಗುತ್ತಿಲ್ಲ. ನನ್ನ ಅವಶ್ಯಕತೆ ಪೂರೈಸುತ್ತಿಲ್ಲ.'

ಜಾಣ ಮಾವ ಉತ್ತರಿಸಿದ, 'ವಾರಂಟಿ ಮುಗಿದಿದೆ, ಉತ್ಪಾದಕರು ಜವಾಬ್ದಾರರಲ್ಲ.'

★★★

ಡ್ರೈವರ್: 'ಸರ್, ಕಾರಲ್ಲಿ ಪೆಟ್ರೋಲ್ ಖಾಲಿ ಆಗಿದೆ. ಕಾರು ಮುಂದಕ್ಕೆ ಹೋಗಲ್ಲ.'

ಗುಂಡ: 'ಸರಿ ಹಾಗಾದ್ರೆ ಹಿಂದಕ್ಕೆ ತಗೋ!"

★★★

ಗುಂಡನಿಗೆ 25 ಜನ ಮಕ್ಕಳು.

ತಿಮ್ಮ ಕೇಳಿದ: 'ಫ್ಯಾಮಿಲಿ ಪ್ಲಾನಿಂಗ್‌ನವರು ನಿಮ್ಮ ಮನೆಗೆ ಬರಲಿಲ್ವಾ?'

ಗುಂಡ: 'ಬಂದಿದ್ರು, ಅಂಗನವಾಡಿ ಅಂದ್ಕೊಂಡು ವಾಪಸ್ ಹೋದ್ರು.'

–ಇಂದು